ಆ. ಎರಡು ಕೆರೆಗಳು ಪೂರ್ಣಗೊಂಡಿವೆ. ಒಂದು ಕೆರೆಯ ಕೆಲಸಕ್ಕೆ ಶ್ರೇಷ್ಠ ನ್ಯಾಯಾಲಯದ ತಡೆಯಾಜ್ಞೆ ಇದೆ, ಇನ್ನೊಂದಕ್ಕೆ ಟೆಂಡರನ್ನು ಕರೆಯಲಾಗಿದೆ. ಉಳಿದ ಕೆರೆಗಳಿಗೆ ಅಂದಾಜು ಪಟ್ಟಿಗಳು ತಯಾರಿಕೆ ಹಂತದಲ್ಲಿವೆ.

ಇ. ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವು ಮಾಡಲು ಹಾಗೂ ಅಂದಾಜು ಪಟ್ಟಿಗಳನ್ನು ಕೂಡಲೇ ಆಡಳಿತಾತ್ಮಕ ಒಪ್ಪಿಗೆ ಹಾಗೂ ತಾಂತ್ರಿಕ ಒಪ್ಪಿಗೆಗಳನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

Mr. Speaker.—The list of Answers laid.

Papers laid on the Table

Sri J. H. Patel (Minister for Excise and Power).—Sir, I beg to lay :

Thirteenth Annual Report of the Karnataka Power Corporation Limited for the year 1982-83 ;

as required under Section 619A of the Companies Act, 1956.

ನಿಯಮ 334ರ ಮೇರೆಗೆ

ವಿಷಯ : (i) ಉಡುಪಿ ತಾಲ್ಲೂಕಿನ ಕಾಪು ಗ್ರಾಮದಲ್ಲಿ ಸುಮಾರು 60 ಎಕರೆ ಜಮೀನಿಗೆ ಸಮುದ್ರಕೊರೆತದಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ವಸಂತ ವಿ. ಸಾಲಿಯಾನ—ಕಾಪು ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಕಾಪು ಗ್ರಾಮದಲ್ಲಿ ಸುಮಾರು 60 ಎಕರೆ ಜಮೀನಿಗೆ ಉಪ್ಪು ನೀರು ನುಗ್ಗಿ ರೈತರಿಗೆ ತುಂಬಾ ತೊಂದರೆಯಾಗಿದೆ. ಈ ವಿಷಯವನ್ನು ನಾನು ಸ್ವತ: ಹೋಗಿ ಕಂದಾಯ ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ಅಸಿಸ್ಟೆಂಟ್ ಕಮೀಷನರಿಗೆ ತಿಳಿಸಿದಾಗಲೂ ಕೂಡ ಯಾವ ರೀತಿಯ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಈ ಬಗ್ಗೆ ಸರ್ಕಾರ ಕೂಡಲೇ ಗಮನಹರಿಸಿ ರೈತರಿಗೆ ಸೂಕ್ತ ಪರಿಹಾರ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಅಧ್ಯಕ್ಷರು.—ಉಡುಪಿ ತಾಲ್ಲೂಕಿನ ಕಾಪು ಕ್ಷೇತ್ರದಲ್ಲಿ ಉಪ್ಪುನೀರು ನುಗ್ಗಿ ತೊಂದರೆಯಾಗಿದೆಯಂತೆ. ದಯವಿಟ್ಟು ವಿಷಯವನ್ನು ಪರಿಶೀಲಿಸಿ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ವರದಿಯನ್ನು ತರಿಸಿಕೊಂಡು ಪರಿಶೀಲಿಸುತ್ತೇನೆ, ಸ್ವಾಮಿ.

ಶ್ರೀ ಆರ್. ಎನ್. ನಾಯಕ್.—ಇದೇ ರೀತಿ ಹೊನ್ನಾವರದಲ್ಲೂ ಆಗಿದೆಯೆಂದು ನಾನು ತಿಳಿಸಿದ್ದೆ. ವರದಿಯನ್ನು ತರಿಸುತ್ತೇನೆ ಎಂದು ಹೇಳಿದ್ದರು. ಇನ್ನೂ ಕೂಡ ವರದಿಯನ್ನು ತರಿಸಿಲ್ಲ.

12 Noon

ಶ್ರೀ ಸಿ.ಮೂಡಲೇಗೌಡ (ಶಿರಾ)–ಶಿರಾ ನಗರದಲ್ಲಿ ಕೊಲಿಮೆ ಮತ್ತು ಬಡಗಿ ಕೆಲಸ ಮಾಡುತ್ತಿರುವ ಲಿಂಗಣ್ಣನವರು ಎತ್ತಿನಗಾಡಿ ಕೂಡಿಸುವ ಕಾರ್ಖಾನೆಯ ಬಡ ಕಾರ್ಮಿಕ. ಕಾರ್ಖಾನೆ ನಡೆಯುತ್ತಿದ್ದ ಪ್ರದೇಶದಲ್ಲಿ ಪಕ್ಕದ ಗುಡಿಸಲಿಗೆ ತಾರೀಖು 22-3-1984ರ ಮಧ್ಯಾಹ್ನ ಸುಮಾರು 4-00 ಗಂಟೆಯಲ್ಲಿ ತಗುಲಿದ ಆಕಸ್ಮಿಕ ಬೆಂಕಿ ಅನಾಹುತದಿಂದ ಕಾರ್ಖಾನೆಯ ಪ್ರದೇಶಕ್ಕೆ ಬೆಂಕಿ ವ್ಯಾಪಿಸಿ, ಸುಮಾರು 25 ಸಾವಿರ ರೂಪಾಯಿಗಳ ನಷ್ಟವನ್ನು ಲಿಂಗಣ್ಣನು ಹೊಂದಿರುತ್ತಾನೆ. ಸದರಿ ಗಾಡಿ ಕಾರ್ಖಾನೆಯನ್ನು ನಡೆಸಲು ಬೇಕಾದ ಎಲ್ಲಾ ಸಾಮಾನುಗಳು ಮತ್ತು ಗಾಡಿಗೆ ಬೇಕಾಗುವ ತೇಗದ ಸಾಮಾನುಗಳೆಲ್ಲಾ ಸುಟ್ಟು ಭಸ್ಮವಾಗಿರುತ್ತದೆ. ಈ ಆಕಸ್ಮಿಕವಾಗಿ ಒದಗಿದ ನಷ್ಟವನ್ನು ಸರ್ಕಾರದ ಸಹಾಯದಿಂದ ಮತ್ತು ಮುಖ್ಯ ಮಂತ್ರಿಗಳ ನಿಧಿಯಿಂದ ಭರ್ತಿ ಮಾಡಿ, ಬಡ ಕಾರ್ಮಿಕನನ್ನು ನಷ್ಟದಿಂದ ಪಾರು ಮಾಡಲು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ರಮೇಶ ಜಿಗಜಿಣಗಿ (ಮಾನ್ಯ ಗೃಹ ಇಲಾಖೆಯ ರಾಜ್ಯ ಸಚಿವರು).—ಈ ಬಗ್ಗೆ ನಾನು ವರದಿ ತರಿಸಿಕೊಂಡು ಮಾನ್ಯ ಸದಸ್ಯರಿಗೆ ಉತ್ತರ ಹೇಳುತ್ತೇನೆ.

ವಿಷಯ : (ii) ಬೆಂಗಳೂರು ನಗರದ ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿಯಲ್ಲಿರ ತಕ್ಕ ಕಾರ್ಮಿಕರು ಮುಷ್ಕರ ಮಾಡಿರುವ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ಗಮನಕೊಟ್ಟು ಕೇಳಬೇಕೆಂದು ಹೇಳುತ್ತೇನೆ. ಬೆಂಗಳೂರು ನಗರದ ಕರ್ನಾಟಕ